## ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ

## ಸಿ.ಸಿ. 1100/2015

| | | |
|---|---|---|
| ಹೆಸರು | ಮುಬಾರಕ್ ಪಾಷ | ಪ್ರಾ.ಸಾ.1 |
| ತಂದೆ ಹೆಸರು | ಮಹಮ್ಮದ್ ಗೌಸ್ | ಚಾ.ಸಾ.1 |
| ವಯಸ್ಸು | 30 ವರ್ಷ | |
| ಕೆಲಸ | ಖಾಸಗಿ ಉದ್ಯೋಗಿ | ಸಾ.ಪ್ರ.ವ.ಬೋ |
| ಹಾಲಿ ವಾಸ | ಬೆಂಗಳೂರು | ದಿ:–26.03.2019 |

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿ ರವರಿಂದ:–**

ಆರೋಪಿ ನನಗೆ ಗೊತ್ತಿಲ್ಲ. 4 ವರ್ಷಗಳ ಹಿಂದೆ ನಾನು ಬೆಂಗಳೂರಿನಿಂದ ಚೀಮಸಂದ್ರಕ್ಕೆ ಹೋಗುತ್ತಿರುವಾಗ ಪೊಲಿಸರು ನಂದಗುಡಿಯ ಹಿಂದೆ ಕೃತ್ಯ ನಡೆದ ಸ್ಥಳದಲ್ಲಿದ್ದು, ಪೊಲೀಸರು ನನ್ನ ಸಹಿಯನ್ನು ಠಾಣೆಯಲ್ಲಿ ಪಡೆದಿರುತ್ತಾರೆ. ಹಾಗೂ ಯಾವ ವಿಚಾರವಾಗಿ ನನ್ನ ಸಹಿ ಪಡೆದರು ಎಂದು ನನಗೆ ಗೊತ್ತಿಲ್ಲ.

ಸಾಕ್ಷಿಯು ದೂರಿನಲ್ಲಿರುವ ಮತ್ತು ಪಂಚನಾಮೆಯಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ದೂರನ್ನು ನಿ.ಪಿ.1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು, ಪಂಚಾನಾಮೆಯನ್ನು ನಿ.ಪಿ.2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ನಿ.ಪಿ.1 ಮತ್ತು 2ರಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಎಪಿಪಿರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಕೋರಿರುತ್ತಾರೆ ಅನುಮತಿ ನೀಡಲಾಯಿತು)**

**ಪಾಟೀ ಸವಾಲು: ಮಾನ್ಯ ಎಪಿಪಿ ರವರಿಂದ:–**

ದಿ:29.03.2015 ರಂದು ನಾನು ಮತ್ತು ನನ್ನ ಸ್ನೇಹಿತರು ನಮ್ಮ ಸಂಬಂಧಿಕರ ಮದುವೆ ರಿಸೆಪ್ಷನ್‌ಗೆ ಹೋಗುತ್ತಿರುವಾಗ ನಮ್ಮ ಬಾಬ್ತು ಸಿಟಿಎ–1910 ಮಾರುತಿ ಓಮಿನಿ ಕಾರಿನಲ್ಲಿ ಬೆಂಗಳೂರಿನಿಂದ ಹೊಸಕೋಟೆ ಮಾರ್ಗವಾಗಿ ಹೊಸಕೋಟೆ – ಚಿಂತಾಮಣಿ ರಸ್ತೆ, ಭೀಮಕ್ಕನಹಳ್ಳಿ ಗ್ರಾಮದ ಬಳಿ ಹೋಗುತ್ತಿದ್ದಾಗ ನಮ್ಮ ಕಾರಿನ ಮುಂಭಾಗ ಕೆಎ–01–ಎಬಿ–8152 ಆಟೋ ರಿಕ್ಷಾ ಹೋಗುತ್ತಿದ್ದು ಚಿಂತಾಮಣಿ ಕಡೆಯಿಂದ ಕೆಎ–01–ಎಮ್‌ಬಿ–6910 ಮಾರುತಿ ಕಾರಿನ ಚಾಲಕ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ನಮ್ಮ ಮುಂದೆ ಹೋಗುತ್ತಿದ್ದ ಆಟೋಗೆ ಡಿಕ್ಕಿ ಹೊಡೆಸಿದ ಎಂದರೆ ನನಗೆ ಗೊತ್ತಿಲ್ಲ. ಆಗ ಡಿಕ್ಕಿ ಹೊಡೆದ ಪರಿಣಾಮ ಆಟೋ ರಸ್ತೆಯ ಮೇಲೆ ಪಲ್ಟಿಯಾಗಿ ಬಂದು ನಮ್ಮ ಕಾರಿನ ಮುಂಭಾಗಕ್ಕೆ ಡಿಕ್ಕಿ ಹೊಡೆಸಿತ್ತು ಎಂದರೆ ಸರಿಯಲ್ಲ. ಡಿಕ್ಕಿ ಹೊಡೆದ ಪರಿಣಾಮ ನಮ್ಮ ಕಾರಿನ ಮುಂಭಾಗ ಜಖಂ ಆಯಿತು ಎಂದರೆ ಸರಿಯಲ್ಲ. ಡಿಕ್ಕಿ ಪಡೆಸಿದ ಕಾರಿನ ಚಾಲಕ ರಸ್ತೆಯಲ್ಲಿ ಬರುತ್ತಿದ್ದ ಮತ್ತೊಂದು ಕೆಎ–07–ಯು–8754 ಮೋಟಾರ್ ಸೈಕಲ್‌ಗೆ ಡಿಕ್ಕಿ ಹೊಡೆಸಿದ ಎಂದರೆ ನನಗೆ ಗೊತ್ತಿಲ್ಲ. ಸದರಿ ಮೋಟಾರ್ ಸೈಕಲ್‌ನ ಸವಾರನಿಗೆ ತಲೆಗೆ, ಮೈಕೈಗೆ ಏಟುಗಳಾಗಿ ಸ್ಥಳದಲ್ಲೇ ಮೃತಪಟ್ಟರು ಎಂದರೆ ನನಗೆ ಗೊತ್ತಿಲ್ಲ. ಅದೇ ದಿನ ನಿಪಿ.1 ರಂತೆ ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ದೂರು ಪಡೆದ ಪೊಲೀಸರು ಮರುದಿನ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ನಿಪಿ.2ರಂತೆ ಮಹಜರ್ ಕ್ರಮ ಜರುಗಿಸಿ ಕೃತ್ಯಕೆ ಸಂಬಂಧಿಸಿದ ಕೆಎ–01–ಎಮ್‌ಬಿ–6910 ಕಾರನ್ನು, ಕೆಎ–01–ಎಬಿ–8152 ಆಟೋವನ್ನು, ಸಿಪಿಎ–1910 ಕಾರನ್ನು, ಕೆಎ–07–ಯು–8754 ಮೋಟಾರ್ ಸೈಕಲ್‌ನ್ನು ಅಮಾನತ್ತು ಪಡಿಸಿಕೊಂಡು ಸ್ಥಳದಲ್ಲಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

ನಿಪಿ.1 ಮತ್ತು 2ರ ವಿಚಾರಗಳು ಸರಿಯಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿತರ ಪರ ವಕೀಲರಿಂದ : ಪಾಟೀ ಸವಾಲು: ಇಲ್ಲ.**

**ಮರುವಿಚಾರಣೆ ಇಲ್ಲ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಹೊಸಕೋಟೆ.**